3) ಕೋಲಾರ ಜಿಲ್ಲೆಗೆ ಬಿಡುಗಡೆ ಮಾಡಲಾಗಿರುವ ಮೊತ್ತ ರೂ.583.44 ಲಕ್ಷಗಳು. ಇದರಲ್ಲಿ ಕೆ.ಜಿ.ಎಫ್.ಗೆ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿರುವ ಮೊತ್ತ ರೂ.12.69 ಲಕ್ಷ ಡಿಸೆಂಬರ್ 2001ರ ವರೆಗೆ ಒಟ್ಟು ಖರ್ಚಾಗಿರುವ ಮೊತ್ತ ರೂ.606.06 ಲಕ್ಷ.

ರಾಜ್ಯದಲ್ಲಿ 1999-2000 ಮತ್ತು 2000-01ನೇ ಸಾಲಿನಲ್ಲಿ ದುರಸ್ತಿ ಮಾಡಿದ ಲೋಕೋಪಯೋಗಿ ಇಲಾಖಾ ರಸ್ತೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 687(1448)

ಸದಸ್ಯರ ಹೆಸರು : ಶ್ರೀ ಎಂ.ಭಕ್ತವತ್ಸಲಂ(ಕೆ.ಜಿ.ಎಫ್.)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. 1999-2000 ಹಾಗೂ 2000-01ನೇ ಸಾಲಿನಲ್ಲಿ ದುರಸ್ತಿ ಮಾಡಿದ ಲೋಕೋಪಯೋಗಿ ಇಲಾಖೆ ರಸ್ತೆಗಳ ಸಂಖ್ಯೆ ಎಷ್ಟು?

2. ಮೇಲಿನ ಕೆಲಸಗಳಿಗೆ ವ್ಯಯಿಸಿದ ಹಣ ಮತ್ತು ಬಿಡುಗಡೆಯಾದ ಹಣ ಎಷ್ಟು?

3. 2001-02ನೇ ಸಾಲಿನಲ್ಲಿ ನಿರ್ವಹಿಸಲಾಗುತ್ತಿರುವ ಲೋಕೋಪಯೋಗಿ ಇಲಾಖೆ ಕೆಲಸಗಳೆಷ್ಟು? (ವಿವರಗಳನ್ನು ನೀಡುವುದು)

ಉತ್ತರ

1. 1999-2000 ಹಾಗೂ 2000-01ನೇ ಸಾಲಿನಲ್ಲಿ ದುರಸ್ತಿ ಮಾಡಿದ ರಸ್ತೆಗಳ ಸಂಖ್ಯೆ 3017.

2. ಈ ರಸ್ತೆಗಳ ನಿರ್ವಹಣೆ ಹಾಗೂ ರಿಪೇರಿಗೆ ಹಿಂದಿನ 2 ವರ್ಷಗಳಲ್ಲಿ ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆಗಳು, ಯೋಜನೇತರ ಅಡಿ ವ್ಯಯಿಸಿದ ವೆಚ್ಚದ ವಿವರ ಇಂತಿದೆ.

(ಲಕ್ಷ ರೂ.ಗಳಲ್ಲಿ)

ವರ್ಷ	ಅನುದಾನ	ವೆಚ್ಚ
1999-2000	14302.07	11766.71
2000-2001	16962.48	15127.15

3. 2001-02ನೇ ಸಾಲಿನಲ್ಲಿ ರಸ್ತೆ ಮತ್ತು ಸೇತುವೆಗಳು (ನಬಾರ್ಡ್ ಸೇರಿದಂತೆ) - 1641 ವಿವರಗಳು ಕೆಳಗಿನಂತಿದೆ.

ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆ

1	ಡಾಂಬರೀಕರಣ	4
2	ಇತರೆ ರಸ್ತೆ ನಿರ್ಮಾಣ	42
3	ಮೇಲ್ದರ್ಜೆಗೇರಿಸಿದ ರಸ್ತೆಗಳು	15
4	ಸಕ್ಕರೆ ಕಾರ್ಖಾನೆ ರಸ್ತೆ ಅಭಿವೃದ್ಧಿ	30
5	ಶಾಸಕರ ಕ್ಷೇತ್ರವಾರು ಕಾರ್ಯಕ್ರಮ	66
6	ಪ್ರಾಮುಖ್ಯತೆ ರಾಜ್ಯ ಹೆದ್ದಾರಿ	2
7	ರಸ್ತೆ ರಹಿತ ಹಳ್ಳಿಗಳು	35
8	ರೈಲ್ವೆ ಸುರಕ್ಷತಾ ಕಾಮಗಾರಿಗಳು	5
9	ವಿಜಯನಗರ ಉಕ್ಕಿನ ಕಾರ್ಖಾನೆ	1
10	ಸೇತುವೆಗಳ ನಿರ್ಮಾಣ	17
11	ರಸ್ತೆ ಮತ್ತು ಸೇತುವೆಗಳು ಯೋಜನೇತರ (ಬಳ್ಳಾರಿ ಪ್ಯಾಕೇಜ್) 84	84
12	ರಸ್ತೆ ಮತ್ತು ಸೇತುವೆಗಳು ನಬಾರ್ಡ್, ಎಂ.ಎ.ಡಿ.ಬಿ. ಮತ್ತು ಹೆಚ್.ಕೆ.ಡಿ.ಬಿ.	1099

13	75 ಕೋಟಿ ಕಾರ್ಯಕ್ರಮ	241
	ಒಟ್ಟು	1641

ಕಂಪ್ಯೂಟರೀಕರಣ ಯೋಜನೆಯನ್ನು ಹೊಸದಾಗಿ ರಚನೆಗೊಂಡ ಹಾವೇರಿ ಜಿಲ್ಲೆಗೆ ಅಳವಡಿಸುವುದು.

ಚುಕ್ಕೆ ಗುರುತಿಲ್ಲದ LA ಪ್ರಶ್ನೆ ಸಂಖ್ಯೆ : 688(1235)

ಸದಸ್ಯರ ಹೆಸರು : ಶ್ರೀ ಬನ್ನಿಕೋಡ್ ಬಿ.ಹೆಚ್.(ಹಿರೇಕೆರೂರು)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

1. ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕಿನ ಕಂದಾಯ ಇಲಾಖೆಯ ಆಡಳಿತ ಚುರುಕುಗೊಳಿಸಲು ಸರ್ಕಾರ ಪ್ರಾರಂಭಿಸಿದ ಕಂಪ್ಯೂಟರೀಕರಣದ ಯೋಜನೆಗಳು ಮತ್ತು ತೆಗೆದುಕೊಂಡ ಕ್ರಮಗಳೇನು?

2. ಹಾವೇರಿ ಜಿಲ್ಲೆಗೆ ಮತ್ತು ತಾಲ್ಲೂಕುಗಳಿಗೆ ಕಂಪೂಟರೀಕರಣದ ಬಗ್ಗೆ ಸರ್ಕಾರದ ಯೋಜನೆ ಹಾಗೂ ತೆಗೆದುಕೊಂಡ ಕ್ರಮಗಳೇನು?

3. ಈವರೆಗೆ ಈ ಯೋಜನೆಗಳಿಗೆ ಆದ ವೆಚ್ಚವೆಷ್ಟು?

4. ಸರ್ಕಾರ ಈ ಯೋಜನೆಯನ್ನು ಸಂಪೂರ್ಣಗೊಳಿಸಲು ಬೇಕಾಗಿರುವ ಅಂದಾಜು ಮೊತ್ತವೆಷ್ಟು?

ಉತ್ತರ

1. ರಾಜ್ಯದಲ್ಲಿ ಇಂದಿನವರೆಗೆ 142 ತಾಲ್ಲೂಕುಗಳಲ್ಲಿ ಭೂ ದಾಖಲೆಗಳ ಗಣಕೀಕರಣ ಯೋಜನೆಯನ್ನು ಆನ್ ಲೈನ್ ಮಾಡಲಾಗಿದೆ. ಉಳಿದ 34 ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಮಾರ್ಚ್ 31ರೊಳಗೆ ಆನ್ ಲೈನ್ ಮಾಡಲಾಗುವುದು.

2. ಹಾವೇರಿ, ಬ್ಯಾಡಗಿ, ಸವಣೂರು, ಶಿಗ್ಗಾಂವ್ ತಾಲ್ಲೂಕುಗಳಲ್ಲಿ ಆನ್ ಲೈನ್ ಮಾಡಿ ಆರ್.ಟಿ.ಸಿ.ಗಳನ್ನು ಗಣಕ ಯಂತ್ರದ ಮುಖಾಂತರ ಖಾತೆದಾರರಿಗೆ ವಿತರಣೆ